ಮುನೀಶ್ ಮೌದ್ಗಿಲ್, ಐ ಎ. ಎಸ್
ಆಯುಕ್ತರು ಹಾಗೂ
ಸರ್ಕಾರದ ಪದನಿಮಿತ್ತ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

GOVERNMENT OF KARNATAKA

ಕರ್ನಾಟಕ ಸರ್ಕಾರದ ಸಚಿವಾಲಯ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ
ಇಲಾಖೆ,

ಅ.ಸ. ಪತ್ರ ಸಂ:ಗ್ರಾಅಪ 24 ಗ್ರಾನೀಸ(2)2015

ಬೆಂಗಳೂರು, ದಿ:06.03.2015

ಪ್ರಿಯ CEO ರವರೆ,

**ವಿಷಯ :** ಜಿಲ್ಲೆಗಳಲ್ಲಿ ನೂತನ RDW&SD ಚಟುವಟಿಕೆಗಳ ಸಲುವಾಗಿ ಇಂಜಿನಿಯರ್‌ಗಳು / ಸಮಾಲೋಚಕರ ಸೇವೆ ಪಡೆದುಕೊಳ್ಳುವ ಕುರಿತು ಸ್ಪಷ್ಟೀಕರಣ.

**ಉಲ್ಲೇಖ :** ಅ.ಸ.ಪತ್ರ ಸಂ: ಗ್ರಾನೀಸ/32/ನೈಇ/2014, ದಿ:21.11.2014.

---

ನೂತನ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಚಟುವಟಿಕೆಗಳನ್ನು ಕಾಲಮಿತಿಯೊಳಗೆ ಸಮರ್ಥವಾಗಿ ನಿಭಾಯಿಸಲು ಜಿಲ್ಲಾ ಪಂಚಾಯತಿಗಳನ್ನು ಸಬಲಗೊಳಿಸುವ ದೃಷ್ಟಿಯಿಂದ ಅಗತ್ಯವಿರುವ ತಾಂತ್ರಿಕ ನೆರವನ್ನು ಪಡೆದುಕೊಳ್ಳಲು ಉಲ್ಲೇಖಿತ ಪತ್ರದ ಆದೇಶದಲ್ಲಿ 5 ತಾಲ್ಲೂಕುಗಳನ್ನು ಹೊಂದಿರುವ ಪ್ರತಿ ಜಿಲ್ಲೆಗೆ ಒಬ್ಬರು ಸಮಾಲೋಚಕರು ಮತ್ತು 6 ರಿಂದ ಅದಕ್ಕಿಂತ ಹೆಚ್ಚಿನ ತಾಲ್ಲೂಕುಗಳಲ್ಲಿರುವ ಜಿಲ್ಲೆಗಳಿಗೆ 2 ಸಮಾಲೋಚಕರು / ಇಂಜಿನಿಯರ್‌ಗಳನ್ನು ಹೊರಗುತ್ತಿಗೆ ಮೇಲೆ ನೇಮಿಸಿಕೊಳ್ಳಲು ಅನುಮತಿ ನೀಡಲಾಗಿದೆ.

ಆದಾಗ್ಯೂ, ಎಲ್ಲಾ ಜಿಲ್ಲೆಗಳಲ್ಲಿ ಕೇಂದ್ರ ಅಥವಾ ರಾಜ್ಯ ಸರ್ಕಾರಿ ಸ್ವಾಮ್ಯದಡಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿರುವ ಸಿವಿಲ್ ಇಂಜಿನಿಯರ್ ಪದವೀಧರರು ದೊರಕದಿರುವುದು ತಿಳಿದು ಬಂದಿದೆ. ಈ ಸಂದರ್ಭಗಳಲ್ಲಿ, ಹೊಸದಾಗಿ ಇಂಜಿನಿಯರಿಂಗ್ ಪಧವಿ ಪಡೆದಿರುವ ಇಂಜಿನಿಯರ್ (BE- Civil/B.Tech)ಗಳಿಗೆ ಮೊದಲ ಆದ್ಯತೆ ನೀಡಬೇಕು. ಅವರು ದೊರಕದಿದ್ದಲ್ಲಿ, ಇಬ್ಬರು ಸಿವಿಲ್ ಇಂಜಿನಿಯರಿಂಗ್ ಡಿಪ್ಲೊಮೋ ಅಭ್ಯರ್ಥಿಗಳನ್ನು EE ಕನ್ಸಲ್ಟೆಟೆಂಟ್ ಹುದ್ದೆ ಖಾಲಿ ಇದ್ದಲ್ಲಿ ನೇಮಿಸಿಕೊಳ್ಳಲು ಅವಕಾಶ ಇದೆಯೆಂದು ಸ್ಪಷ್ಟೀಕರಿಸಿದೆ. ಇಂತಹ ಸನ್ನಿವೇಶದಲ್ಲಿ ಇಬ್ಬರು ಹೊರಗುತ್ತಿಗೆ ಸೇವಾ ನೌಕರರಿಗೆ ಒಟ್ಟಾರೆ ವೇತನ ಪಾವತಿ ಮಾಹೆಯಾನ ರೂ.25000/- ಮೀರುವಂತಿಲ್ಲ.

ಈ ರೀತಿ ನೇಮಕಗೊಂಡ ತಾಂತ್ರಿಕ ಸಮಾಲೋಚಕರು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕುಡಿಯುವ ನೀರಿನ ಯೋಜನೆಗಳ ಬಾಬ್ತಿಗೆ ಸಂಬಂಧಿಸಿದಂತೆ ಅಗತ್ಯವಿರುವ ನೆರವನ್ನು ನೀಡತಕ್ಕದ್ದು. ಈ ರೀತಿ ಹೊರಗುತ್ತಿಗೆ ಸೇವೆಯನ್ನು MNREGAಯಿಂದ ಅನುಮೋದನೆಯಾಗಿರುವ ಹೊರಗುತ್ತಿಗೆ ಸಂಸ್ಥೆ ಮುಖೇನ ಪಡೆದುಕೊಳ್ಳಬಹುದು.

ಈ ಬಾಬ್ತಿನ ವೆಚ್ಚವನ್ನು NRDWP-Support Activityಯಡಿ ಲಭ್ಯವಿರುವ ಅನುದಾನದ ವತಿಯಿಂದ ಭರಿಸಲು ಕ್ರಮವಹಿಸುವಂತೆ ಕೋರುತ್ತೇನೆ.

ತಮ್ಮ ವಿಶ್ವಾಸಿ

6/3/15

(ಮುನೀಶ್ ಮೌದ್ಗಿಲ್)

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತ್
30-ಜಿಲ್ಲೆಗಳು